KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨, ೨೦೧೦ (ಭಾದ್ರಪದ ೧೧, ಶಕ ವರ್ಷ ೧೯೩೨)	ಸಂಚಿಕೆ ೩೫

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

EDUCATION SECRETARIAT

NOTIFICATION

No:ED 293 SEP 2008 Bangalore, Dated:10th August, 2010

Whereas the draft of the following rules further to amend the Karnataka Educational Institutions (Grant-in-Aid for Primary, Secondary and pre-university Educational Institutions) Rules, 1998 which the Government of Karnataka proposes to make in exercise of the powers conferred by sub-section (1)of section 145 of the Karnataka Education Act, 1983 (Karnataka Act 1 of 1995), was published as required by sub- section (1) of the said section, in Notification No.ED 293 SEP 2008, dated 30th April 2008 in part-IVA of the Karnataka Gazette Extraordinary dated 05.05.2009, inviting objections and suggestions from the persons likely to be affected thereby within thirty days from the date of its publication in the official Gazette.

Whereas the said Gazette was made available to the public on 30-04-2009;

And whereas, no objections and suggestions in respect of the said draft have been received by the Government.

RULES

1. Title and Commencement: (1) these rules may be called the Karnataka Educational institutions (Grant-in-Aid for Primary, Secondary and pre-university Educational institutions) (Amendment) Rules, 2009.

(2) They shall come into force from the date of their publication in the official Gazette.

2. Amendment of Rule-3: In the Karnataka Educational institutions(Grant-in-Aid for primary, Secondary and pre-university Educational institutions) Rules 1998, in rule 3, in the proviso, for the words and figures "First day of june 1992", the words and figures "First day of june 1994" shall be substituted.

By order and in the name of the Governor of Karnataka,

H.T. JAYARAM

PR-768

Under Secretary to Government,

Education Department.

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 647 ವೆಚ್ಚ–12/10, ಬೆಂಗಳೂರು, ದಿನಾಂಕ:9ನೇ ಆಗಸ್ಟ್, 2010

ಶಿವಮೊಗ್ಗ ನೂತನ ಖಾಸಗಿ ಬಸ್ ನಿಲ್ದಾಣದ ಖಾಲಿ ಉಳಿದಿರುವ ಪ್ರದೇಶದಲ್ಲಿ ಖಾಸಗಿ ಸಹಭಾಗಿತ್ವದ ಡಿ.ಬಿ.ಓ.ಟಿ. (Design Build Operate Transfer) ಆಧಾರದ ಬಹುಮಹಡಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ ರೂ.5.00 ಲಕ್ಷಗಳ ಮಿತಿಯೊಳಗೆ ಮೆ:ಐಡೆಕ್ ಸಂಸ್ಥೆ, ಬೆಂಗಳೂರು ಇವರನ್ನು ನೇರವಾಗಿ ಯೋಜನಾ ಸಮಾಲೋಚಕರನ್ನಾಗಿ ನಿಯೋಜಿಸಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ನಗರಾಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉತ್ಪನ್ನ/ಸೇವೆಯನ್ನು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಶೇಖರಪ್ಪ

ಪಿ.ಆರ್.759

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 493 ವೆಚ್ಚ–12/10, ಬೆಂಗಳೂರು, ದಿನಾಂಕ:7ನೇ ಆಗಸ್ಟ್, 2010

ರಾಜ್ಯದಲ್ಲಿ ಉತ್ಪಾದನೆಯಾಗುವ ಉಣ್ಣೆಯನ್ನು ವಿಶ್ಲೇಷಣೆಗೊಳಪಡಿಸುವ ಹಾಗೂ ಇದನ್ನು ಉಪಯೋಗಿಸುವ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಯೋಜನಾ ವರದಿಯನ್ನು ತಯಾರಿಸುವ ಕಾರ್ಯವನ್ನು ನೇರವಾಗಿ ರೂ.2.00 ಲಕ್ಷ ವೆಚ್ಚದಲ್ಲಿ ಭಾರತೀಯ ಕಾರ್ಪೆಟ್ ತಂತ್ರಜ್ಞಾನ ಸಂಸ್ಥೆಗೆ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಭಾರತೀಯ ಕಾರ್ಪೆಟ್ ತಂತ್ರಜ್ಞಾನ ಸಂಸ್ಥೆಯು ಈ ಕಾಮಗಾರಿಗಳನ್ನು ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮ ಮತ್ತು ನಿಯಮಗಳನ್ನು ಪಾಲಿಸಬೇಕು. ಉತ್ತಮ ಗುಣಮಟ್ಟದ ಉತ್ಪನ್ನ/ಸೇವೆಯನ್ನು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಗಳು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಶೇಖರಪ್ಪ

ಪಿ.ಆರ್.760

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 683 ವೆಚ್ಚ–12/10, ಬೆಂಗಳೂರು, ದಿನಾಂಕ:13ನೇ ಆಗಸ್ಟ್, 2010

ಕರ್ನಾಟಕ ಭವನ, ನವದೆಹಲಿ ಇಲ್ಲಿಗೆ ಅಗತ್ಯವಿರುವ ಪಾತ್ರೆಗಳನ್ನು ಅಂದಾಜು ರೂ.4.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉತ್ಪನ್ನ/ಸೇವೆಯನ್ನು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಶೇಖರಪ್ಪ

ಪಿ.ಆರ್.761 ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಸಂವಾಪ್ರ 14 ಕರಾಗೆ 2008, ಬೆಂಗಳೂರು, ದಿನಾಂಕ:10ನೇ ಆಗಸ್ಟ್, 2010

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣದೊಂದಿಗೆ ಓದಿಕೊಂಡು 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿದ ಈ ಮುಂದಿನ ನಿಯಮಗಳ ಕರಡನ್ನು ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ–ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಿದಂತೆ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ರಾಜ್ಯ ಸರ್ಕಾರವು ಸದರಿ ಕರಡು ಅಧಿಸೂಚನೆಗೆ ಸಂಬಂಧಪಟ್ಟಂತೆ ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ ಸ್ವೀಕರಿಸಲಾಗುವ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಪರ್ಯಾಲೋಚಿಸುತ್ತದೆ. ಆಕ್ಷೇಪಣೆಗಳನ್ನು ಅಥವಾ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ಕೊಠಡಿ ಸಂಖ್ಯೆ–2, ನೆಲಮಹಡಿ, ವಿಕಾಸಸೌಧ, ಬೆಂಗಳೂರು–01 ಇವರಿಗೆ ಸಲ್ಲಿಸಬಹುದು.

ಕರಡು ನಿಯಮಗಳು

1. ಹೆಸರು ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ಗ್ಯಾಸೆಟಿಯರ್ ಇಲಾಖೆ) (ನೇಮಕಾತಿ) ನಿಯಮಗಳು, 2010ಎಂದು ಕರೆಯತಕ್ಕದ್ದು.

(2) ಇವುಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನೇಮಕಾತಿ ವಿಧಾನ ಮತ್ತು ಕನಿಷ್ಟ ವಿದ್ಯಾರ್ಹತೆ:– ಸರ್ಕಾರದ ಅಧಿಸೂಚನೆ ಸಂಖ್ಯೆ ಜೆಎಡಿ 35 ಒಆರ್ಆರ್ 60 ದಿನಾಂಕ 2ನೇ ಮಾರ್ಚ್ 1961ಅನ್ನು ರದ್ದುಗೊಳಿಸಿ, ಕರ್ನಾಟಕ ಸಾಮಾನ್ಯ ಸೇವೆಗಳು (ಗ್ಯಾಸೆಟಿಯರ್ ಇಲಾಖೆ) ಸಂಬಂಧದಲ್ಲಿ ರಾಜ್ಯ ಸಿವಿಲ್ ಸೇವಾ ವೃಂದಗಳ ಸಿಬ್ಬಂದಿಯು ಕೆಳಗೆ ನೀಡಿರುವ ಅನುಸೂಚಿಯ ಕಾಲಂ 2 ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಪ್ರವರ್ಗ ಮತ್ತು ವೇತನ ಶ್ರೇಣಿಯನ್ನು ಒಳಗೊಂಡಿರತಕ್ಕದ್ದು ಮತ್ತು ಹುದ್ದೆಗಳ ಸಂಖ್ಯೆ ನೇಮಕಾತಿ ವಿಧಾನ ಹಾಗೂ ಕನಿಷ್ಠ ವಿದ್ಯಾರ್ಹತೆಗಳೇನಾದರೂ ಇದ್ದರೆ ಅವು ಅನುಸೂಚಿಯ (3), (4), (5) ಹಾಗೂ (6)ನೇ ಕಾಲಂಗಳಲ್ಲಿನ ಸಂವಾದಿ ನಮೂದುಗಳಲ್ಲಿ ಪ್ರತಿ ಪ್ರವರ್ಗದ ಎದುರು ನಿರ್ದಿಷ್ಟಪಡಿಸಿದಂತಿರತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು:– ಕರ್ನಾಟಕ ಸಾಮಾನ್ಯ ಸೇವೆಗಳು (ಗ್ಯಾಸೆಟಿಯರ್ ಶಾಖೆ) (ನೇಮಕಾತಿ) ನಿಯಮಗಳು, 1961ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಅಂಥ ನಿರಸನವು ಸದರಿ ನಿಯಮಗಳ ಪೂರ್ವ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ ಅಥವಾ ಅದರ ಅಡಿಯಲ್ಲಿ ಯುಕ್ತವಾಗಿ ಮಾಡಿದ ಅಥವಾ ಮಾಡಲು ಅವಕಾಶ ಮಾಡಿಕೊಟ್ಟ ಯಾವುದೇ ಕಾರ್ಯ ಅಥವಾ ಸದರಿ ನಿಯಮಗಳ ಅಡಿಯಲ್ಲಿ ಅರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಬಾಧ್ಯತೆ ಅಥವಾ ಹೊಣೆಗಾರಿಕೆ ಮೇಲೆ ಪರಿಣಾಮ ಬೀರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಭರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ.

ಅನುಬಂಧ–1

ಷೆಡ್ಯೂಲ್ (ನಿಯಮ–2 ನೋಡಿ)

ಕ್ರಮ ಸಂಖ್ಯೆ	ವರ್ಗೀಕೃತ ಹುದ್ದೆಗಳು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ		
1	**2**	**3**	**4**	**5**	**6**
1.	ಮುಖ್ಯ ಸಂಪಾದಕರು (20025–28275)	1	–	ಹಿರಿಯ ಸಂಪಾದಕರ ಶ್ರೇಣಿಯಿಂದ ಬಡ್ತಿ/ಇಲ್ಲವೇ ಆಯ್ಕೆ ಮೂಲಕ ಹಿರಿಯ ಸಂಪಾದಕರ: ವೃಂದದಿಂದ ಜೇಷ್ಠತೆ ಹಾಗೂ ಅರ್ಹತೆ ಆಧರಿಸಿ ಬಡ್ತಿ ಅಥವಾ ಅರ್ಹ ಹಿರಿಯ ಸಂಪಾದಕರು ಲಭ್ಯವಿಲ್ಲದಿದ್ದಲ್ಲಿ ಸಮಾನಾಂತರ ಗ್ರೇಡ್ ಹೊಂದಿರುವ ಕರ್ನಾಟಕ ನಾಗರೀಕ ಸೇವಾ ಅಧಿಕಾರಿಗಳ ವೃಂದದಿಂದ ಪ್ರತಿನಿಯೋಜನೆ ಮೇಲೆ ನೇಮಕಾತಿ.	1) **ಆಯ್ಕೆ ಆಧಾರಿತ ಬಡ್ತಿಗೆ:** ಈ ಕೆಳಕಂಡ ಯಾವುದಾದರೂ ಒಂದು ವಿಷಯದಲ್ಲಿ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಕನ್ನಡ ಅಥವಾ ಇಂಗ್ಲೀಷ್. 2) ಹಿರಿಯ ಸಂಪಾದಕರ ಹುದ್ದೆಯಲ್ಲಿ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವಾನುಭವ ಹೊಂದಿರಬೇಕು.
2.	ಹಿರಿಯ ಸಂಪಾದಕ (14050–25050)	–	2	ಸಂಪಾದಕ ವೃಂದದಿಂದ ಜ್ಯೇಷ್ಠತೆ ಮೇರೆಗೆ ಬಡ್ತಿ	**ಬಡ್ತಿಗಾಗಿ:** 1) ಬಡ್ತಿಗೆ ಸಂಪಾದಕರಾಗಿ ಕನಿಷ್ಠ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು. 2) ಈ ಕೆಳಕಂಡ ಯಾವುದಾದರೂ ಒಂದು ವಿಷಯದಲ್ಲಿ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಕನ್ನಡ ಅಥವಾ ಇಂಗ್ಲೀಷ್.

ಕ್ರಮ ಸಂಖ್ಯೆ	ವರ್ಗೀಕೃತ ಹುದ್ದೆಗಳು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಟ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ		
1	**2**	**3**	**4**	**5**	**6**
3.	ಸಂಪಾದಕರು (11400–21600)	9	–	1) ಶೇಕಡಾ 50ರಷ್ಟು ಗ್ರೇಡ್–2 ಹಾಗೂ ಅನ್ವೇಷಕರ ಹುದ್ದೆಗಳಿಂದ ಸಂಯುಕ್ತ ಜೇಷ್ಠತೆಯನ್ನಾಧರಿಸಿ ಬಡ್ತಿ ಜೇಷ್ಠತೆಯನ್ನು ಪರಿಗಣಿಸುವಾಗ ಹೆಚ್ಚಿನ ವೇತನ ಶ್ರೇಣಿಯನ್ನು ಹೊಂದಿದವರನ್ನು ಕಡಿಮೆ ವೇತನಶ್ರೇಣಿ ಹೊಂದಿರುವವರಿಗಿಂತ ಹಿರಿಯವನೆಂದು ಪರಿಗಣಿಸಲಾಗುವುದು. ಸಂಪಾದಕರ ಹುದ್ದೆಗೆ ಬಡ್ತಿ ನೀಡುವಾಗ, ಹೆಚ್ಚಿನ ವೇತನಶ್ರೇಣಿಯನ್ನು ಪರಿಗಣಿಸಿ ಜೇಷ್ಠತೆಯಲ್ಲಿ ಹಿರಿಯರೆಂದು ಪರಿಗಣಿಸಲಾಗುವುದು. ಒಂದೇ ವೇತನ ಶ್ರೇಣಿ ಹೊಂದಿದ್ದರೇ ಅವರು ಸಲ್ಲಿಸಿರುವ ಸೇವಾವಧಿಯನ್ನು ಪರಿಗಣಿಸಿ ಜೇಷ್ಠತೆಯನ್ನು ಅವರ ವೃಂದಕ್ಕನುಗುಣವಾಗಿ ನಿರ್ಧರಿಸಬೇಕಾಗುತ್ತದೆ ಮತ್ತು ವೃಂದಗಳಲ್ಲಿರುವವರ ಪರಸ್ಪರ (Interse) ಜೇಷ್ಠತೆಯನ್ನು ಪರಿಪಾಲಿಸಬೇಕು. 2. ಶೇ.ಐವತ್ತರಷ್ಟು ಸಮಾನ ವೇತನ ಶ್ರೇಣಿವುಳ್ಳ–ರಾಜ್ಯದ ಇತರೆ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರಿಂದ ಪ್ರತಿನಿಯೋಜನೆ ಮೇಲೆ ತುಂಬಲಾಗುವುದು.	**ಬಡ್ತಿಗೆ:** ಸಂಪಾದಕ ಗ್ರೇಡ್ 2 ಹುದ್ದೆಯಲ್ಲಿ ಅಥವಾ ಅನ್ವೇಷಕ ಹುದ್ದೆಯಲ್ಲಿ ಕನಿಷ್ಟ 5 ವರ್ಷಗಳ ಸೇವೆ ಸಲ್ಲಿಸಿರಬೇಕು. ಈ ಕೆಳಕಂಡ ಯಾವುದಾದರೂ ವಿಷಯಗಳಲ್ಲಿ ಎರಡನೇ ದರ್ಜೆ ಸ್ನಾತಕೋತ್ತರ ಪದವಿ ಹೊಂದಿರಬೇಕು. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಕನ್ನಡ ಅಥವಾ ಇಂಗ್ಲೀಷ್. **ನಿಯೋಜನೆ:** ಈ ಕೆಳಗಿನ ಯಾವುದೇ ವಿಷಯದಲ್ಲಿ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಕನ್ನಡ ಅಥವಾ ಇಂಗ್ಲೀಷ್.
4.	ಸಂಪಾದಕ ಗ್ರೇಡ್–2 (10800–20025)	2	–	**ಟಿಪ್ಪಣಿ:** ಸದರಿಯವರ (ಗ್ರೇಡ್–2 ಸಂಪಾದಕರು) ಹುದ್ದೆಯು ಮುಂಬಡ್ತಿಯಿಂದಾಗಲೀ ನಿವೃತ್ತಿಯಿಂದಾಗಲೀ ಖಾಲಿ ಆದಾಗ ಹುದ್ದೆಯು ರದ್ದಾಗುತ್ತದೆ.	

ಕ್ರಮ ಸಂಖ್ಯೆ	ವರ್ಗೀಕೃತ ಹುದ್ದೆಗಳು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ		
1	**2**	**3**	**4**	**5**	**6**
5.	ಅನ್ವೇಷಕರು (10000–18150)	5	–	1) ಶೇ. ಇಪ್ಪತ್ತೈದರಷ್ಟು ಪ್ರ.ದ.ಸ. ಹುದ್ದೆಗಳಿಂದ ಜೇಷ್ಠತೆಯನ್ನಾಧರಿಸಿ ಬಡ್ತಿ. 2) ಶೇ. ಎಪ್ಪತ್ತೈದರಷ್ಟು ನೇರನೇಮಕಾತಿ	**ಬಡ್ತಿಗೆ:** 1) ಕೆಳಕಂಡ ಯಾವುದಾದರೂ ಒಂದು ವಿಷಯದಲ್ಲಿ ಎರಡನೇ ದರ್ಜೆ ಸ್ನಾತಕೋತ್ತರ ಪದವಿ ಹೊಂದಿರಬೇಕು. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳ, ಕನ್ನಡ ಅಥವಾ ಇಂಗ್ಲೀಷ್. 2) ಪ್ರ.ದ.ಸ. ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವಾ ಅನುಭವ ಹೊಂದಿರಬೇಕು. **ನೇರನೇಮಕಾತಿಗೆ:** ಈ ಕೆಳಕಂಡ ಯಾವುದಾದರೊಂದು ವಿಷಯದಲ್ಲಿ ಎರಡನೇ ದರ್ಜೆ ಸ್ನಾತಕೋತ್ತರ ಪದವಿ ಹೊಂದಿರಬೇಕು. (ಇತರ ವರ್ಗದವರಿಗೆ ಶೇ.55 ಅಂಕಗಳು ಶೇ.50 ಅಂಕಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮತ್ತು ಕೆಳಕಂಡ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು) ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಕನ್ನಡ ಅಥವಾ ಇಂಗ್ಲೀಷ್.
6.	ಅಧೀಕ್ಷಕ (10000–18150)	1	–	1. ಪ್ರ.ದ.ಸ. ವೃಂದದಿಂದ ಬಡ್ತಿ ಅಥವಾ ರಾಜ್ಯ ಇತರೆ ಇಲಾಖಾ ಸೇವೆಯಲ್ಲಿದ್ದು, ಸಮಾನಂತರ ವೇತನಶ್ರೇಣಿ ಹೊಂದಿರುವವರನ್ನು ನಿಯೋಜನೆಯ ಮೇರೆಗೆ ನೇಮಕಾತಿ. **ಟಿಪ್ಪಣಿ:** ಪ್ರ.ದ.ಸ. ರಾದವರು ಅನ್ವೇಷಕ/ ಅಧೀಕ್ಷಕ ಹುದ್ದೆಗೆ ಬಡ್ತಿಗೆ ಅರ್ಹರಾದ ಸಂದರ್ಭದಲ್ಲಿ ನೀಡುವ ಒಪ್ಪಿಗೆ ಪತ್ರವು ಅಂತಿಮವಾಗಿದ್ದು ಹಿಂಪಡೆಯಲು ಆಗುವುದಿಲ್ಲ.	**ಬಡ್ತಿಗೆ:** ಪ್ರ.ದ.ಸ. ಆಗಿ ಕನಿಷ್ಠ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು. ಅಥವಾ ರಾಜ್ಯ ಇತರ ಇಲಾಖಾ ಸೇವೆಯಲ್ಲಿದ್ದು, ಸಮಾನಾಂತರ ವೇತನಶ್ರೇಣಿ ಹೊಂದಿರುವವರನ್ನು ನಿಯೋಜನೆಯ ಮೇರೆಗೆ ನೇಮಕಾತಿ.

ಕ್ರಮ ಸಂಖ್ಯೆ	ವರ್ಗೀಕೃತ ಹುದ್ದೆಗಳು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಟ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ		
1	2	3	4	5	6
7.	ಪ್ರಥಮ ದರ್ಜೆ ಸಹಾಯಕ (7275–13,350)	2	–	1. ಶೇ. ಐವತ್ತರಷ್ಟು ಎರಡನೇ ದರ್ಜೆ ಸಹಾಯಕ ವೃಂದದಿಂದ ಬಡ್ತಿ. 2. ಶೇ. ಐವತ್ತರಷ್ಟು ನೇರ ನೇಮಕಾತಿಯಿಂದ ಕರ್ನಾಟಕ ನಾಗರೀಕ ಸೇವಾ (ಲಿಪಿಕ ವೃಂದದ ನೇಮಕಾತಿ) ನಿಯಮ 1978ರನ್ವಯ ನೇಮಕಾತಿ.	**ಬಡ್ತಿಗೆ:** ಎರಡನೇ ದರ್ಜೆ ವೃಂದದಲ್ಲಿ ಕನಿಷ್ಟ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು. ಐದು ವರ್ಷಗಳ ಸೇವೆ ಸಲ್ಲಿಸಿದವರು ಇಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆ ಸಲ್ಲಿಸಿದವರನ್ನು ಪರಿಗಣಿಸಲಾಗುವುದು.
8.	ಶೀಘ್ರಲಿಪಿಗಾರ (7275–13350)	1	–	ಜೇಷ್ಠತೆಯ ಆಧಾರದ ಮೇಲೆ ಬೆರಳಚ್ಚುಗಾರ ವೃಂದದಿಂದ ಬಡ್ತಿ ಒಂದು ವೇಳೆ ಸೂಕ್ತ ವ್ಯಕ್ತಿ ಇಲ್ಲದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ ನೇರ ನೇಮಕಾತಿ ನಿಯಮ 1983ರಡಿಯಲ್ಲಿ ನೇರ ನೇಮಕಾತಿ ಮೂಲಕ ಮಾಡಬಹುದಾಗಿದೆ.	ಬಡ್ತಿಗೆ ಬೆರಳಚ್ಚುಗಾರ ಹುದ್ದೆಯಲ್ಲಿ ಕನಿಷ್ಟ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು ಹಾಗೂ ಕರ್ನಾಟಕ ನಾಗರೀಕ ಸೇವಾ ನೇರ ನೇಮಕಾತಿ ನಿಯಮ 1983ರಡಿಯಲ್ಲಿ ಹೇಳಿರುವ ವಿದ್ಯಾರ್ಹತೆ ಹೊಂದಿರಬೇಕು. ಐದು ವರ್ಷಗಳ ಸೇವೆ ಸಲ್ಲಿಸಿದವರು ಬಡ್ತಿಗೆ ಪರಿಗಣಿಸಲಾಗುವುದು. ಐದು ವರ್ಷಗಳ ಸೇವೆ ಸಲ್ಲಿಸಿದವರು ಸಿಗದಿದ್ದಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದವರನ್ನು ಬಡ್ತಿಗೆ ಪರಿಗಣಿಸಲಾಗುವುದು.
9.	ಗ್ರಂಥಪಾಲಕ (8000–14800)	1	–	ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಸಮಾನ ಶ್ರೇಣಿಯವರನ್ನು ಪ್ರತಿ ನಿಯೋಜನೆ ಮೇಲೆ ಭರ್ತಿ ಮಾಡಲಾಗುವುದು.	
10.	ಎರಡನೇ ದರ್ಜೆ ಸಹಾಯಕ (5800–10500)	1	–	ಕರ್ನಾಟಕ ನಾಗರೀಕ ಸೇವಾ (ಲಿಪಿಕ ವೃಂದಕ್ಕೆ ನೇಮಕಾತಿ) ನಿಯಮಗಳು 1978ರ ಅನುಸಾರ ನೇರ ನೇಮಕಾತಿ	

ಕ್ರಮ ಸಂಖ್ಯೆ	ವರ್ಗೀಕೃತ ಹುದ್ದೆಗಳು ಮತ್ತು ವೇತನ ಶ್ರೇಣಿ	ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ		
1	2	3	4	5	6
11.	ಬೆರಳಚ್ಚುಗಾರ (5800–10500)	3	–	ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರು, ಬೆರಳಚ್ಚುಗಾರರ ನೇರ ನೇಮಕಾತಿ) ನಿಯಮಗಳು 1983ರ ಅನುಸಾರ ನೇರ ನೇಮಕಾತಿ.	
12.	ವಾಹನ ಚಾಲಕ (5800–10500)	1	–	ಡಿ ವರ್ಗದಿಂದ ಬಡ್ತಿ ಜೇಷ್ಠತಾ ಆಧಾರದ ಮೇಲೆ ಯಾರು ಕಡಿಮೆ ವೇತನ ಶ್ರೇಣಿ ಹೊಂದಿರುವವರಿಗಿಂತ ಅಧಿಕ ವೇತನ ಶ್ರೇಣಿಯನ್ನು ಹೊಂದಿರುತ್ತಾರೋ ಅವರನ್ನು ಪರಿಗಣಿಸಲಾಗುವುದು. ಒಂದೇ ವೇತನ ಶ್ರೇಣಿಯನ್ನು ಹೊಂದಿದ್ದಲ್ಲಿ ಅವರು ಸಲ್ಲಿಸಿರುವ ಸೇವಾವಧಿಯನ್ನು ಪರಿಗಣಿಸಿ ಪರಸ್ಪರ (Interse) ಜೇಷ್ಠತೆಯನ್ನು ನಿರ್ಧರಿಸಬೇಕು. ಬಡ್ತಿಗೆ ಅರ್ಹರು ಸಿಗದಿದ್ದಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು.	ನೇರ ನೇಮಕಾತಿ ಹಾಗೂ ಬಡ್ತಿಗೆ 7ನೇ ತರಗತಿ ತೇರ್ಗಡೆ, ಮೋಟಾರು ವಾಹನ ಚಾಲ್ತಿಯಲ್ಲಿ ಚಾಲನಾ ಪರವಾನಗಿ ಪಡೆದಿರಬೇಕು. ಇತರೆ ಸರ್ಕಾರಿ ಇಲಾಖೆಗಳಲ್ಲಿ ಅನುಸರಿಸುವ ನಿಯಮಾನುಸಾರ ನೇಮಕ ಮಾಡುವುದು. ಸಂಬಂಧಪಟ್ಟ ನೇಮಕಾತಿ ಸಂಸ್ಥೆಯ ನೇಮಕದ ನಂತರ ಸದರಿಯವರು ಪೊಲೀಸ್ ಚಾಲನಾ ಮತ್ತು ನಿರ್ವಹಣಾ ಶಾಲೆಯವರು ನೀಡಿರುವ ಪರೀಕ್ಷಾ ತೇರ್ಗಡೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
13.	ದಫೇದಾರ್ (5200–8200)	1	–	ಗ್ರೂಪ್ ಡಿ ವೃಂದದ ಕೆಳವೃಂದದಿಂದ ಬಡ್ತಿಯ ಮೂಲಕ ನೇಮಕ	ಗ್ರೂಪ್ ಡಿ ವೃಂದದ ಕೆಳವೃಂದದಲ್ಲಿ ಕನಿಷ್ಠ ಏಳು ವರ್ಷಗಳ ಸೇವೆ ಸಲ್ಲಿಸಿರಬೇಕು.
14.	ಗ್ರೂಪ್ ಡಿ (4,800–7,275)	3	–	ನೇರ ನೇಮಕಾತಿ	ಏಳನೆಯ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ವ್ಯಾಸಂಗ ಮಾಡಿರಬೇಕು.

ಘನತೆವೆತ್ತ ರಾಜ್ಯಪಾಲರ ಆಜ್ಞಾನುಸಾರ

ಎಂ.ಕೆ. ಧರ್ಮರಾಜಪ್ಪ

ಪಿ.ಆರ್.775

ಅಧೀನ ಕಾರ್ಯದರ್ಶಿಗಳು,

ಕನ್ನಡ ಮತ್ತು ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.